

بسم الله الرّحمٰن الرّحيم

**ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅವರ ಶುಕ್ರವಾರ ಖುತುಬದ ಸಾರಾಂಶ – 21.02.2014**

# ಮುಸ್ಲಿಹ್ ಮೌಊದ್: ಒಂದು ಮಹತ್ತರ ಭವಿಷ್ಯವಾಣಿಯ ಈಡೇರಿಕೆ

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹುಝೂರ್ ಹೀಗೆ ಹೇಳಿದರು:–

ನಿನ್ನೆ ಫೆಬ್ರವರಿ ದಿನಾಂಕ 20. ನಮ್ಮ ಜಮಾಅತ್ ಮುಸ್ಲಿಹ್ ಮೌಊದ್ ದಿನವೆಂದು ಈ ದಿನವನ್ನು ಕೊಂಡಾಡುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನಗೊಬ್ಬ ಪುತ್ರನು ಜನಿಸುವನೆಂದು ಆ ಪುತ್ರ ಪರಿಶುದ್ಧನೂ ಸಾತ್ವಿಕನೂ ಆಗುವನು ಎಂದೂ ಇತರ ಅನೇಕ ಗುಣಗಳು ಆ ಪುತ್ರನಿಗಿರುವುದೆಂದೂ ಭವಿಷ್ಯ ನುಡಿದಿದ್ದರು. ಕಳೆದ ವಾರ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೆ ಅಲ್ಲಾಹನು ಪ್ರಕಟಿಸಿದ ದೃಷ್ಟಾಂತಗಳ ಬಗ್ಗೆ ವಿವರಿಸಿದ್ದೆನು. ಈ ದಿನ ಫೆಬ್ರವರಿ 20 ದಿನಾಂಕದ ಮರುದಿನವಾದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು 1886 ಫೆಬ್ರವರಿ ದಿನಾಂಕ 20ರಂದು ಪ್ರಕಟಿಸಿದ ಮಹತ್ತಾದ ಭವಿಷ್ಯವಾಣಿಯ ಬಗ್ಗೆ ವಿವರಿಸುವೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನನ್ನು ವಿರೋಧಿಸುವವರೊಂದಿಗೆ ಹೇಳಿದರು: ಈ ಭವಿಷ್ಯವಾಣಿ ಈಡೇರಿಸುವುದು ಮನುಷ್ಯನ ಶಕ್ತಿಗೆ ಸೇರಿದುದಲ್ಲ. ತನಗೆ ಜನಿಸುವ ಪುತ್ರನು ದೀರ್ಘಾಯುಸ್ಸು ಪಡೆಯುವನು ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು. ಈ ಭವಿಷ್ಯವಾಣಿಯ ಬಗ್ಗೆ ಗಾಢವಾಗಿ ಚಿಂತಿಸಿದರೆ ಇದರಲ್ಲಿ ದೇವನ ದೃಷ್ಟಾಂತ ಅಡಕವಾಗಿದೆ ಎಂದು ತಿಳಿಯಬಹುದು. ತನ್ನ ವಿರೋಧಿಗಳಿಗೆ ಈ ಭವಿಷ್ಯವಾಣಿಯ ಬಗ್ಗೆ ಸಂದೇಹವಿದ್ದರೆ ಆ ವಿರೋಧಿಗಳು ಇಂತಹದೇ ಭವಿಷ್ಯವಾಣಿಯನ್ನು ಪ್ರಕಟಿಸಲು ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪಂಥಾಹ್ವಾನ ನೀಡಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದರು: "ಇದು ಕೇವಲ ಒಂದು ಭವಿಷ್ಯವಾಣಿ ಮಾತ್ರವಲ್ಲ; ಇದು ಅಲ್ಲಾಹನ ಒಂದು ದೃಷ್ಟಾಂತವಾಗಿದೆ." ತನ್ನ ಆಗಮನದ ಉದ್ದೇಶ ಇಸ್ಲಾಮ್ ಧರ್ಮದ ಸತ್ಯತೆಯನ್ನು, ಹಝ್ರತ್ ಮುಹಮ್ಮದ್ ಪೈಗಂಬರರ ಶ್ರೇಷ್ಠತೆಯನ್ನು ಸ್ಥಾಪಿಸುವುದಾಗಿದೆ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದುದರಿಂದ ಅವರು ಮೇಲೆ ಉಲ್ಲೇಖಿಸಿದ ಭವಿಷ್ಯವಾಣಿ ತನ್ನ ಸತ್ಯತೆಗೆ ಸಾಕ್ಷ್ಯ ಎಂದು ಹೇಳದೆ ಹೀಗೆ ಹೇಳಿದರು:– "ಮಹೋನ್ನತನಾದ ಅಲ್ಲಾಹನು ಈ ದೃಷ್ಟಾಂತವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಸತ್ಯವನ್ನೂ ಶ್ರೇಷ್ಠತೆಯನ್ನೂ ಬಹಿರಂಗಪಡಿಸಲು ಪ್ರಕಟಿಸುವನು. ಈ ದೃಷ್ಟಾಂತವು ಒಬ್ಬ ಸತ್ತ ಮನುಷ್ಯನನ್ನು ಜೀವಂತಗೊಳಿಸುವ ದೃಷ್ಟಾಂತಕ್ಕಿಂತ ನೂರಾರು ಪಟ್ಟು ಶಕ್ತಿಶಾಲಿಯೂ ಶ್ರೇಷ್ಠವೂ ಆಗಿದೆ. ಒಬ್ಬ ಸತ್ತ ಮನುಷ್ಯನನ್ನು ಜೀವಂತಗೊಳಿಸಲು ಅವನ ಆತ್ಮವನ್ನು ಅಲ್ಪಕಾಲಕ್ಕೆ ಮರಳಿ ಕರೆದರೆ ಸಾಕಾಗುವುದು."

ಬೈಬಲ್‌ನಲ್ಲಿ ಹಝ್ರತ್ ಈಸಾ ಅಲೈಹಿಸ್ಸಲಾಮರ ಬಗ್ಗೆ ಮತ್ತು ಇತರ ಪ್ರವಾದಿಗಳ ಬಗ್ಗೆ ಅವರು ಸತ್ತವರನ್ನು ಜೀವಂತ ಗೊಳಿಸಿದರೆಂದು ಬರೆದರೆ ಇದನ್ನು ಪ್ರಶ್ನಿಸಬಹುದುದಾಗಿದೆ. ಆದರೆ ಒಬ್ಬ ಸತ್ತ ಮನುಷ್ಯನ ಆತ್ಮ ಲೋಕಕ್ಕೆ ಮರಳಿ ಬಂದು ಶರೀರವನ್ನು ಪ್ರವೇಶಿಸಿದರೆ ಲೋಕಕ್ಕೆ ಸಿಗುವ ಪ್ರಯೋಜನವೇನು? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: "ಅಲ್ಲಾಹನ ಅನುಗ್ರಹದಿಂದ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮೂಲಕ ದೊರೆತ ವರದಾನಗಳಿಂದ ಮಹೋನ್ನತನಾದ ಅಲ್ಲಾಹನು ಈ ವಿನೀತನ ಪ್ರಾರ್ಥನೆಗಳನ್ನು ಅಂಗೀಕರಿಸಿದನು. ಅವನು ಒಂದು ಅನುಗ್ರಹಿಸಲ್ಪಟ್ಟ ಆತ್ಮವನ್ನು ಲೋಕಕ್ಕೆ ಕಳುಹಿಸುವುದಾಗಿ ವಾಗ್ದಾನ ಮಾಡಿದನು. ಆಗಮಿಸಲಿರುವ ಆ ಪುತ್ರನಿಗೆ ದೊರೆತ ಬಾಹ್ಯ ಮತ್ತು ಆಂತರಿಕ ಅನುಗ್ರಹಗಳು ಲೋಕದಲ್ಲಿ ಹರಡುವುವು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳಿದರು: "ಓ ಜನರೇ, ನಾನು ನಿಸ್ಸಾರನು. ನನ್ನನ್ನು ಆಕ್ರಮಿಸುವವನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲ ಮರನ್ನು ಆಕ್ರಮಿಸುತ್ತಾನೆ. ಆದರೆ ನನ್ನ ವಿರೋಧಿಗೆ ಸೂರ್ಯನ ಕಡೆಗೆ ಮಣ್ಣನ್ನು ಎಸೆಯಲಾಗದು. ಆ ಮಣ್ಣು ಅವನ ಮೇಲೆಯೇ ಬೀಳುವುದು. ಅವನ ತಲೆ, ಅವನ ಕಣ್ಣು, ಅವನ ಬಾಯಿ ಮೇಲೆ ಬಿದ್ದು ಅದು ಅವನನ್ನು ಅಪಮಾನಿತನನ್ನಾಗಿ ಮಾಡುವುದು. ನಮ್ಮ ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ವೈಭವಕ್ಕೆ ಕುಂದುಂಟಾಗಲಾರದು. ವಾಸ್ತವಿಕವಾಗಿ ಮಹೋನ್ನತನಾದ ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರ(ಸ)ರ ವೈಭವವನ್ನು ಇನ್ನಷ್ಟು ವರ್ಧಿಸಿ ಪ್ರಕಟಿಸುವನು. ಸೂರ್ಯನು ಮುಂಜಾನೆ ಉದಿಸುವುದನ್ನು ನೀವು ತಡೆಯಬಲ್ಲಿರೋ? ಇದೇ ರೀತಿ ನೀವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಎಂಬ ಸೂರ್ಯನನ್ನು ಹಾನಿಗೊಳಪಡಿಸಲಾರಿರಿ. ಅವರ ಸತ್ಯತೆಗೆ ಭಂಗ ಉಂಟುಮಾಡಲಾರಿರಿ. ಅಲ್ಲಾಹನು ನಿಮ್ಮ ದ್ವೇಷಾಸೂಯೆಗಳನ್ನು ದೂರೀಕರಿಸಲಿ."

ನಮಗೆಲ್ಲಾ ತಿಳಿದಿರುವಂತೆ ವಾಗ್ದತ್ತ ಪುತ್ರ 1889 ಮಾರ್ಚ್ ತಿಂಗಳಲ್ಲಿ ಜನಿಸಿದರು. ಅವರು ಎಂತಹ ಯಶಸ್ಸನ್ನು ಗಳಿಸಿದರೆಂದರೆ ಲೋಕಾಂತ್ಯದ ತನಕ ಆ ಮಹತ್ತಾದ ಯಶಸ್ಸನ್ನು ಜನರು ನೆನಪಿಸುವರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ಗಳಿಸಿದ ಜಯಗಳನ್ನು ವಿವರಿಸುವ ಮೊದಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪ್ರಕಟಿಸಿದ ಭವಿಷ್ಯವಾಣಿಯನ್ನು ಉಲ್ಲೇಖಿಸುವೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬರೆದರು:– 1886 ಫೆಬ್ರವರಿ ದಿನಾಂಕ 20ರಂದು ಮಹೋನ್ನತನೂ ಪರಮದಯಾಮಯನು ಆದ ಅಲ್ಲಾಹನು ನನಗೆ ಹೀಗೆ ಸಂದೇಶವಾಣಿ ಅವತೀರ್ಣಗೊಳಿಸಿದನು:– ನೀನು ನನ್ನಿಂದ ಬೇಡಿಕೊಂಡ ಪ್ರಕಾರ ನಾನು ನನ್ನ ಕೃಪೆಯಿಂದ ನಿನಗೊಂದು ದೃಷ್ಟಾಂತ ದಯಪಾಲಿಸುತ್ತೇನೆ. ನಿನ್ನ ಬೇಡಿಕೆಗಳನ್ನು ನಾನು ಆಲಿಸಿದೆ. ನಾನು ಅವುಗಳನ್ನು ನನ್ನ ಕೃಪೆಯಿಂದ ಅಂಗೀಕರಿಸಿ ನಿನ್ನ ಪ್ರಯಾಣ ನಿನಗೆ ಅನುಗ್ರಹದಾಯಕವನ್ನಾಗಿ ಮಾಡಿದೆ. ಆದುದರಿಂದ ಶಕ್ತಿ, ಕೃಪೆ, ಮತ್ತು ನಿಕಟ ಸಂಬಂಧದ ದೃಷ್ಟಾಂತ ತೋರಿಸುತ್ತೇನೆ. ನಿನಗೆ ಜಯದ ಕೀಲಿಗೈ ನೀಡಲಾಗುತ್ತಿದೆ.

ಓ ಜಯಶಾಲಿ, ನಿನಗೆ ಶಾಂತಿ ಇರಲಿ. ಮರಣ ಶಯ್ಯೆಯಲ್ಲಿರುವವರು ರಕ್ಷಿಸಲ್ಪಡಲು ಮತ್ತು ಗೋರಿಗಳಲ್ಲಿ ದಫನುಗೊಳಿಸಲ್ಪಟ್ಟವರು ಅವುಗಳಿಂದ ಹೊರಗೆ ಬರಲು, ಇಸ್ಲಾಮಿನ ಶ್ರೇಷ್ಠತೆ ಮತ್ತು ದೇವ ವಚನದ ಗೌರವ ಪ್ರಕಟಗೊಳ್ಳಲು, ಸತ್ಯವು ಅದರ ಅನುಗ್ರಹಗಳೊಂದಿಗೆ ಆಗಮಿಸಲು, ಸುಳ್ಳು ಅದರ ಕೆಡುಕುಗಳೊಂದಿಗೆ ಓಡಿಹೋಗಲು, ನಾನು ಶಕ್ತಿಶಾಲಿ ದೇವನೆಂದು ಜನರು ಮನವರಿಕೆ ಮಾಡಿಕೊಳ್ಳಲು, ನಾನು

ಉದ್ದೇಶಿಸುವುದನ್ನು ನಾನು ಮಾಡಬಲ್ಲೆನೆಂದು ಮತ್ತು ನಾನು ನಿನ್ನೊಂದಿಗೆ ಇದ್ದೇನೆಂದು ಜನರು ತಿಳಿಯಲು, ದೇವನನ್ನು ನಂಬದವರು ಅವನ ಧರ್ಮವನ್ನೂ ಅವನ ಗ್ರಂಥವನ್ನೂ ಅವನ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರ(ಸ)ರನ್ನೂ ನಂಬದವರು ಈ ದೃಷ್ಟಾಂತವನ್ನು ಸ್ಪಷ್ಟವಾಗಿ ಕಾಣುವರು ಮತ್ತು ಅಪರಾಧಿಗಳು ಯಾರೆಂದು ಪ್ರಕಟವಾಗುವುದು. ನೀನು ಆನಂದಿಸು. ಒಬ್ಬ ಪರಿಶುದ್ಧ ಪುತ್ರ ನಿನಗೆ ದೊರಕುವನು. ಅವನು ನಿನ್ನ ಬೀಜದಿಂದ ನಿನ್ನ ಸಂತಾನಕ್ಕೆ ಸೇರಿದವನಾಗುವನು. ಒಬ್ಬ ಸುಂದರ ಹುಡುಗ ಅತಿಥಿಯಾಗಿ ಸಹ ಬರಲಿದ್ದಾನೆ. ಅವನ ಹೆಸರು ಇಮ್ಮಾನುವೇಲ್ ಮತ್ತು ಬಶೀರ್ ಎಂದು. ಅವನು ಪರಿಶುದ್ಧಿಯನ್ನು ಹೊಂದಿರುವನು. ಅವನು ಎಲ್ಲಾ ಕೊಳೆಗಳಿಂದ ಮುಕ್ತನಾಗಿರುವನು. ಅವನು ಅಲ್ಲಾಹನ ಪ್ರಕಾಶವಾಗಿದ್ದಾನೆ. ಆಕಾಶದಿಂದ ಬರುವವನು ಅನುಗ್ರಹೀತನು. ಅವನು ಅನುಗ್ರಹದೊಂದಿಗೆ ಆಗಮಿಸುವನು.

ಅವನು ವೈಭವಶಾಲಿ, ಘನವಂತನೂ ಐಶ್ವರ್ಯವಂತನೂ ಆಗುವನು. ಅವನು ಲೋಕಕ್ಕೆ ಬಂದು ತನ್ನ ಮಸೀಹೀ ಗುಣದಿಂದ (ಚಿಕಿತ್ಸಕ ಗುಣದಿಂದ) ಅನೇಕರ ರೋಗಗಳನ್ನು ಗುಣ ಪಡಿಸುವನು ಮತ್ತು ತನಗೆ ದೊರೆತ ಅನುಗ್ರಹಗಳನ್ನು ಪ್ರಕಟಿಸುವನು. ಅವನು ಕಲಿಮತುಲ್ಲಾಹ್ (ದೇವವಚನ) ಆಗಿರುವನು. ಅವನಿಗೆ ಅಲ್ಲಾಹನು ವೈಭವ ನೀಡಿರುವನು. ಅವನು ಅತ್ಯಂತ ಬುದ್ಧಿಶಾಲಿಯೂ ಸೂಕ್ಷ್ಮಮತಿಯೂ ಆಗಿರುವನು. ಅವನು ಮೃದುಹೃದಯಿಯಾಗಿರುವನು. ಅವನು ಲೌಕಿಕ ಮತ್ತು ಆಧ್ಯಾತ್ಮಿಕ ಜ್ಞಾನಸಂಪನ್ನನಾಗುವನು. ಅವನು ಮೂರನ್ನು ನಾಲ್ಕನ್ನಾಗಿ ಮಾಡುವನು. ಇಂದು ಸೋಮವಾರ. ಅನುಗ್ರಹೀತ ಸೋಮವಾರ.

ಪುತ್ರ, ಹೃದಯಕ್ಕೆ ನೆಮ್ಮದಿ ನೀಡುವವನು ಉನ್ನತನೂ ಘನವಂತನೂ ಆಗುವನು. ಆದಿ ಮತ್ತು ಅಂತ್ಯದಲ್ಲಿರುವ ಅಲ್ಲಾಹನ ದೃಷ್ಟಾಂತ ಸತ್ಯ ಮತ್ತು ಉನ್ನತ ದೃಷ್ಟಾಂತ. ದೇವನೇ ಆಕಾಶದಿಂದ ಇಳಿದುಬಂದಂತೆ. ಅವನ ಆಗಮನ ಬಹಳ ಅನುಗ್ರಹಭರಿತ ವಾಗುವುದು. ದೇವನ ವೈಭವದ ಪ್ರಕಟಣೆಯಾಗಿರುವುದು. ಒಂದು ಪ್ರಕಾಶ ದೇವನಿಂದ ಆಗಮಿಸಿದೆ. ದೇವನ ಸಂಪ್ರೀತಿಯೆಂಬ ಸುವಾಸನೆಯೊಂದಿಗೆ.

ನಾವು ಅವನಿಗೆ ನಮ್ಮ ಆತ್ಮವನ್ನು ಇಳಿಸುವೆವು. ಅವನು ದೇವನ ನೆರಳಲ್ಲಿ ಆಶ್ರಯಪಡೆಯುವನು. ಅವನು ಬೇಗನೆ ಬೆಳೆಯುವನು. ಅವನು ಸೆರೆಯಾಳುಗಳನ್ನು ಬಿಡುಗಡೆಗೊಳಿಸುವನು. ಅವನ ಕೀರ್ತಿ ಲೋಕದ ಅಂಚುಗಳಿಗೆ ತಲುಪುವುದು. ಜನರು ಅವನ ಮೂಲಕ ಅನುಗ್ರಹಗಳಿಸುವರು. ಅನಂತರ ಅವನನ್ನು ಅವನ ಆಧ್ಯಾತ್ಮಿಕ ತಂಗುದಾಣಕ್ಕೆ ಎತ್ತಲಾಗುವುದು. ಇದು ದೇವನಿಂದ ವಿಧಿಸಲ್ಪಟ್ಟದ್ದಾಗಿದೆ. (ತಝ್ಕಿರ: 175–77).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಜನಿಸಲಿದ್ದ ಪುತ್ರನ ಗುಣಗಳು ಮೇಲಿನಂತೆ ವಿವರಿಸಲ್ಪಟ್ಟಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು 52 ವರ್ಷಗಳ ಕಾಲ ಖಲೀಫರಾಗಿ ಕಾರ್ಯನಿರತರಾಗಿ ತನ್ನ ಸಾಮರ್ಥ್ಯಗಳನ್ನು ಪ್ರಕಟಿಸಿದರು. ನಂತರ ಇಹಲೋಕವನ್ನು ಬಿಟ್ಟು ಹೋದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ವಿವಿಧ ಗುಣಗಳನ್ನು ತಳಸ್ಪರ್ಶಿಯಾಗಿ ವಿಶದೀಕರಿಸಲು ಅನೇಕ ಗ್ರಂಥಗಳು ಬೇಕಾಗುವುವು. ಅವರ ಜೀವಿತವನ್ನು ಅವರು ಗಳಿಸಿದ ಜಯಗಳನ್ನು ಭಾಷಣಗಳಲ್ಲೂ ಪ್ರವಚನಗಳಲ್ಲೂ ವಿವರಿಸಲು ಸಾಧ್ಯವಾಗದು. ನಮ್ಮ ಜಮಾಅತ್ ಫೆಬ್ರವರಿ 20ರಂದು "ಯೌಮೇ ಮುಸ್ಲಿಹ್ ಮೌಊದ್" ದಿನಾಚರಣೆ ಮಾಡುತ್ತಿದೆ. ವಿದ್ವಾಂಸರು ತಮ್ಮ ಜ್ಞಾನ ಪ್ರಕಾರ ಭಾಷಣ ಮಾಡುತ್ತಾರೆ. ನಾನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಕುರಿತು ಇದರ ಮೊದಲು ಪ್ರವಚನ ನೀಡಿರುವೆನು. ಇದೇ ರೀತಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಮತ್ತು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಪ್ರವಚನ ನೀಡಿರುವರು. ಆದರೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಜೀವಿತದ ಬಗ್ಗೆಯಾಗಲೀ ಅವರ ಬಗ್ಗೆ ಇರುವ ಭವಿಷ್ಯವಾಣಿಯ ಬಗ್ಗೆಯಾಗಲೀ ಪೂರ್ಣರೂಪದ ವಿವರಣೆ ನೀಡಲಾಗಿದೆ ಎಂದಾಗಲಿ ಪ್ರತಿಯೊಬ್ಬರು ಅವುಗಳ ಬಗ್ಗೆ ಮನವರಿಕೆ ಮಾಡಿರುವರು ಎಂದಾಗಲಿ ಹೇಳಲು ಸಾಧ್ಯವಿಲ್ಲ. ಈ ದಿನ ನಾನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರಿಗೆ ಸಂಬಂಧಿಸಿ ಒಂದು ಅಂಶದ ಬಗ್ಗೆ ಮಾತ್ರ ವಿವರಿಸುವೆನು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಕಾಲದಲ್ಲಿ ಅವರ ಭಾಷಣಗಳನ್ನು ಸರಿಯಾಗಿ ರಿಕಾರ್ಡ್ ಮಾಡುವ ವ್ಯವಸ್ಥೆ ಇರಲಿಲ್ಲ. ಜನರು ಭಾಷಣಗಳನ್ನು ಬರೆದಿಡುತ್ತಿದ್ದರು. ಆದರೆ ಸಂಪೂರ್ಣವಾಗಿ ನಿಖರವಾಗಿ ಅವರಿಗೆ ದಾಖಲಿಸಲು ಸಾಧ್ಯವಿರಲಿಲ್ಲ. ಫಝ್ಲೆ ಉಮರ್ ಫೌಂಡೇಶನ್ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಪುಸ್ತಕಗಳ ಮತ್ತು ಭಾಷಣಗಳ 24 ಸಂಪುಟಗಳನ್ನು ಪ್ರಕಟಿಸಿದೆ. ಅದರಲ್ಲಿ 633 ಭಾಷಣಗಳು ಮತ್ತು ಪುಸ್ತಕಗಳಿವೆ. ಫಝ್ಲೆಉಮರ್ ಫೌಂಡೇಶನ್ ಸಂಗ್ರಹಿಸಿದ ಭಾಷಣಗಳು ಮತ್ತು ಪುಸ್ತಕಗಳು 32 ಸಂಪುಟಗಳಲ್ಲಿ ಪ್ರಕಟವಾಗುವುವು. ಅದರಲ್ಲಿ 850 ಭಾಷಣಗಳು ಮೊದಲಾದುವು ಇರುವುವು. ಸಂಪುಟ 25 ರಿಂದ 29ರ ತನಕ ಮುದ್ರಣಕ್ಕೆ ಸಿದ್ಧವಾಗಿವೆ. ಇದೇ ರೀತಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ಶುಕ್ರವಾರ ನೀಡಿದ ಖುತುಬಗಳು, ಈದ್ ಖುತುಬಗಳು ಮತ್ತು ನಿಕಾಹ್ ಖುತುಬಗಳು 2076 ಆಗಿವೆ. ಅವುಗಳಲ್ಲಿ ಖುತ್‌ಬಾತೆ ಮಹ್‌ಮೂದ್ ಎಂದು 28 ಸಂಪುಟಗಳಲ್ಲಿ 1602 ಖುತುಬಗಳನ್ನು ಪ್ರಕಟಿಸಲಾಗಿದೆ. 1948 ರಿಂದ 1959ರ ತನಕ ನೀಡಿದ ಖುತುಬಗಳನ್ನು ಅನಂತರ ಪ್ರಕಟಿಸಲಾಗುವುದು. ಇದು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಜ್ಞಾನವರ್ಧಕ ಕೃತಿಗಳಾಗಿವೆ. ಅವರು ಬರೆದ ಪ್ರತಿಯೊಂದು ಲೇಖನ ಬುದ್ಧಿ ವೈಭವ ಜ್ಞಾನ ಮತ್ತು ಆಧ್ಯಾತ್ಮಿಕ ಅರಿವನ್ನು ಒಳಗೊಂಡಿದೆ.

ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದರು: ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರಿಗೆ ಸಂಬಂಧಿಸಿದ ಭವಿಷ್ಯವಾಣಿಯ ಒಂದಂಶವನ್ನು ತೆಗೆದುಕೊಂಡರೂ, ಉದಾಹರಣೆಗೆ: "ಅವನು ಲೌಕಿಕ ಮತ್ತು ಆಧ್ಯಾತ್ಮಿಕ ಜ್ಞಾನ ಸಂಪನ್ನನಾಗುವನು" ಎಂಬ ಅಂಶವನ್ನು ತೆಗೆದುಕೊಂಡರೆ, ಇದು ಎಷ್ಟು ವಿಶಾಲವಾದ ವಿಷಯವೆಂದರೆ ಇದರ ಬಗ್ಗೆ ಎಷ್ಟು ವಿವರಣೆ ನೀಡಿದರೂ ಪೂರ್ಣವಾಗಲಾರದು. ಒಂದು ಉದಾಹರಣೆ, ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ತಫ್ಸೀರ್ ಕಬೀರ್ ಆಗಿದೆ. ಅದು ಎಂತಹ ಅದ್ಭುತ ವ್ಯಾಖ್ಯಾನ ಗ್ರಂಥವಾಗಿದೆ ಎಂದರೆ ಅದರ ಒಂದು ಭಾಗವನ್ನು ಶ್ರದ್ಧೆಯಿಂದ ಮನಸ್ಸುಗೊಟ್ಟು ಒಬ್ಬನು ಓದುವುದಾದರೆ ಅವನು ಹೀಗೆ ಮನವರಿಕೆ ಮಾಡಿಕೊಳ್ಳುವನು: ಇಂತಹ ಬೃಹತ್ ವ್ಯಾಖ್ಯಾನದ ಒಂದು ಭಾಗವನ್ನು ಪವಿತ್ರ ಖುರ್‌ಆನಿನ ವಿಶದವಾದ ವಿವರಣೆಯೊಂದಿಗೆ ಯಾರಾದರೂ ಬರೆದರೆ ಅಂತಹ ಮನುಷ್ಯನು ಸಹ ಪರಿಶುದ್ದ ಜನರಲ್ಲಿ ಅತ್ಯಂತ ಪರಿಶುದ್ಧನಾದವನು ಎಂದು ಗಣಿಸಲ್ಪಡುವನು. ಆದರೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಬಹಳ ವಿಸ್ತಾರವಾಗಿ ಪವಿತ್ರ ಖುರ್‌ಆನಿಗೆ ವ್ಯಾಖ್ಯಾನ ಬರೆದಿರುವರು. ಅವರು ಹತ್ತು ಸಾವಿರದಿಂದ ಹನ್ನೆರಡು ಸಾವಿರ ಪುಟಗಳಷ್ಟು ವ್ಯಾಖ್ಯಾನ ಬರೆದಿದ್ದಾರೆ. ಈಗ

ಪ್ರಕಟವಾದ ತಫ್‌ಸೀರ್ ಕಬೀರ್ 6000 ಪುಟಗಳಷ್ಟಿವೆ. ಅವರು ಪವಿತ್ರ ಖುರ್‌ಆನ್ ಬಗ್ಗೆ ಬೇರೆ ಗ್ರಂಥಗಳಲ್ಲೂ ಬರೆದಿದ್ದಾರೆ. ಈಗ ಪ್ರಕಟವಾದ ತಫ್‌ಸೀರ್ ಕಬೀರ್ ಸೂರತುಲ್ ಫಾತಿಹಾದಿಂದ ಸೂರತುಲ್ ಬಖರ ತನಕ, ಸೂರತುಲ್ ಯೂನುಸ್‌ನಿಂದ ಸೂರತುಲ್ ಅಂಕಬೂತ್ ತನಕ, ಸೂರತುನ್ನಬಾದಿಂದ ಸೂರತುನ್ನಾಸ್ ತನಕ 59 ಸೂರತ್‌ಗಳನ್ನು ಒಳಗೊಂಡು 6000 ಪುಟಗಳಲ್ಲಿ ಪ್ರಕಟವಾಗಿದೆ. 55 ಸೂರತ್‌ಗಳ ವ್ಯಾಖ್ಯಾನ ಪ್ರಕಟಿಸಲು ಬಾಕಿ ಇದೆ. ಪ್ರಕಟವಾದ ಗ್ರಂಥಗಳಲ್ಲಿ ಅಕ್ಷರಗಳು ಚಿಕ್ಕದಾಗಿವೆ. ಈಗ ಬಳಸಲಾಗುವ ಅಕ್ಷರಗಳ ಗಾತ್ರವನ್ನು ಬಳಸಿದರೆ ಈ ಪುಟಗಳು 10 ರಿಂದ 12 ಸಾವಿರ ಪುಟಗಳಷ್ಟಾಗುವುದು ಪುನರ್ ಮುದ್ರಣ ಜಾರಿಯಲ್ಲಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಳಿಯಲ್ಲಾಹು ಅನ್‌ಹು 10 ಪುಸ್ತಕಗಳನ್ನೂ ಲೇಖನಗಳನ್ನೂ ಸಾಹಿತ್ಯ ಕಲೆಯ ಬಗ್ಗೆ, 31 ಪುಸ್ತಕಗಳನ್ನೂ ಲೇಖನಗಳನ್ನೂ ಆಧ್ಯಾತ್ಮಿಕತೆ ಇಸ್ಲಾಮೀ ನೈತಿಕ ಗುಣಗಳು, ಮತ್ತು ಇಸ್ಲಾಮ್ ಧರ್ಮ ವಿಶ್ವಾಸಗಳ ಬಗ್ಗೆ ಬರೆದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಗ್ಗೆ 13 ಪುಸ್ತಕಗಳನ್ನೂ ಲೇಖನಗಳನ್ನೂ ಬರೆದರು. ಚರಿತ್ರೆಯ ಬಗ್ಗೆ 4 ಪುಸ್ತಕಗಳನ್ನು, 3 ಪುಸ್ತಕಗಳನ್ನು ಫಿಖ್‌ಹ್ ಬಗ್ಗೆ, 25 ಪುಸ್ತಕಗಳನ್ನು ವಿಭಜನೆಗೆ ಪೂರ್ವದ ರಾಜಕೀಯ ಸಮಸ್ಯೆಗಳ ಬಗ್ಗೆ, 9 ಪುಸ್ತಕಗಳನ್ನು ಪಾಕಿಸ್ತಾನ ನಿರ್ಮಾಣದ ನಂತರದ ರಾಜಕೀಯ ಸಮಸ್ಯೆಗಳ ಬಗ್ಗೆ ಬರೆದರು. 15 ಪುಸ್ತಕಗಳನ್ನೂ ಲೇಖನಗಳನ್ನೂ ಕಾಶ್ಮೀರದ ರಾಜಕಾರಣಿ ಬಗ್ಗೆ ಮತ್ತು ಅಹ್ಮದಿಯಾ ಜಮಾಅತ್ ಬಗ್ಗೆ ಮತ್ತಿತರ ವಿಷಯಗಳ ಬಗ್ಗೆ 100 ಪುಸ್ತಕಗಳನ್ನು ರಚಿಸಿದರು.

ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಳಿಯಲ್ಲಾಹು ಅನ್‌ಹು ಹೇಳಿದರು: ಹಝ್ರತ್ ಮುಸ್ಲಿಹ್ ಮೌಊದ್ ರಳಿಯಲ್ಲಾಹು ಅನ್‌ಹು ಲೌಕಿಕ ಮತ್ತು ಆಧ್ಯಾತ್ಮಿಕ ಜ್ಞಾನ ಸಂಪನ್ನರಾಗಿರುವರು ಎಂದು ಭವಿಷ್ಯವಾಣಿ ಬಗ್ಗೆ ತಿಳಿಯಲು ಅವರ ಗ್ರಂಥಗಳ ಕಡೆಗೆ ದೃಷ್ಟಿಹಾಯಿಸಿದರೆ ಸಾಕಾಗುವುದು. ಅವರ ಪುಸ್ತಕಗಳು ಮತ್ತು ಲೇಖನಗಳು ಎಷ್ಟು ಸುಂದರವಾಗಿವೆ ಎಂದರೆ ಪ್ರತಿಯೊಬ್ಬರು ಹೇಳಿದರು: ಅದಕ್ಕಿಂತ ಸುಂದರವಾಗಿ ಬೇರೆ ಯಾರೂ ಬರೆಯಲಾರರು ಎಂದು. ಅವರು ನೀಡಿದ ರಾಜಕೀಯ ಸಲಹೆಗಳ ಬಗ್ಗೆ ಒಳ್ಳೆಯವರಾದ ಗಣ್ಯರು ಅವರ ಅದ್ವಿತೀಯ ಜ್ಞಾನವನ್ನು ಮೆಚ್ಚಿದರು. ಸಂಕ್ಷಿಪ್ತವಾಗಿ ಹೇಳುವುದಾದರೆ, ಅವರ ಲೌಕಿಕ ಮತ್ತು ಆಧ್ಯಾತ್ಮಿಕ ಜ್ಞಾನದ ಒಂದು ಸಾವಿರದ ಒಂದು ಭಾಗದಷ್ಟು ಸಹ ನಾವು ವಿವರಿಸಲಾರೆವು.

ಹಝ್ರತ್ ಮುಸ್ಲಿಹ್ ಮೌಊದ್ ರಳಿಯಲ್ಲಾಹು ಅನ್‌ಹು ಬಗ್ಗೆ ಅಹ್ಮದಿಯೇತರರಾದ ವಿದ್ವಾಂಸರು ಹೀಗೆ ಹೇಳಿದರು: ಅಲ್ಲಾಮ ನಿಯಾಝ್ ಫತ್‌ಹ್‌ಪುರಿ ಹಝ್ರತ್ ಮುಸ್ಲಿಹ್ ಮೌಊದ್ ರಳಿಯಲ್ಲಾಹು ಅನ್‌ಹುರವರಿಗೆ ಬರೆದ ಪತ್ರದಲ್ಲಿ ಹೀಗೆ ಬರೆದರು: ನನ್ನ ಮುಂದೆ ತಫ್‌ಸೀರ್ ಕಬೀರ್ ಮೂರನೆಯ ಸಂಪುಟವಿದೆ. ನಾನು ಈ ಗ್ರಂಥವನ್ನು ಓದಿದಾಗ ಪವಿತ್ರ ಖುರ್‌ಆನಿನ ಬಗ್ಗೆ ಹೊಸ ಮತ್ತು ಸಂಪೂರ್ಣ ವಿಭಿನ್ನ ದೃಷ್ಟಿಕೋನವನ್ನು ಕಂಡೆನು. ಉರ್ದು ಭಾಷೆಯಲ್ಲಿ ಇದು ಅತ್ಯುತ್ತಮವಾದ ಪ್ರಥಮ ವ್ಯಾಖ್ಯಾನವಾಗಿದೆ. ನಿಮ್ಮ ಸೂಕ್ಷ್ಮಜ್ಞಾನ, ನಿಮ್ಮ ವಾಗ್‌ವೈಭವ ಮತ್ತು ವೈಚಾರಿಕತೆ ಪ್ರತಿಯೊಂದು ಶಬ್ದದಲ್ಲಿ ಪ್ರಕಟವಾಗುತ್ತಿದೆ. ಇಷ್ಟರವರೆಗೆ ಈ ಗ್ರಂಥದ ಬಗ್ಗೆ ತಿಳಿಯದುದು ಖೇದಕರವಾಗಿದೆ. ಪ್ರವಾದಿ ಲೂತ್ ಅಲೈಹಿಸ್ಸಲಾಮರ ಬಗ್ಗೆ ಬರೆದ ವ್ಯಾಖ್ಯಾನ ಓದಿ ನನ್ನ ಹೃದಯ ಕಂಪಿಸಿತು. ನಾನು ನಿಮಗೆ ಪತ್ರ ಬರೆಯಲು ನಿರ್ಬಂಧಿತನಾದೆನು. ತಫ್‌ಸೀರ್ ಕಬೀರ್ ಪ್ರಕಟಣೆ ಇಸ್ಲಾಮ್ ಧರ್ಮಕ್ಕೆ ಮಾಡಿದ ಮಹತ್ತಾದ ಸೇವೆಯಾಗಿದೆ. ವಿರೋಧಿಗಳು ಸಹ ಅದನ್ನು ನಿರಕರಿಸಲಾರರು.

ಪಾಟ್ನ ಯುನಿವರ್ಸಿಟಿಯ ಪ್ರೊಫೆಸರ್ ಅಖ್ತರ್ ಸಾಹೇಬರು ಹೇಳುತ್ತಾರೆ: ನಾನು ತಫ್‌ಸೀರ್ ಕಬೀರ್ ಸಂಪುಟಗಳನ್ನು ಪರ್ಶಿಯನ್ ಭಾಷೆಯ ಪ್ರೊಫೆಸರ್ ಅಬ್ದುಲ್ ಮನ್ನಾನ್ ಸಾಹೇಬರಿಗೆ ಕೊಟ್ಟೆನು. ಪ್ರೊಫೆಸರ್ ಮನ್ನಾನ್ ಸಾಹೇಬರಿಗೆ ಮೆಚ್ಚಿಗೆ ಆಯಿತು. ಅವರು ಅದರ ಸಂಪುಟಗಳನ್ನು ಇತರ ವಿದ್ವಾಂಸರಿಗೂ ನೀಡಿದರು. ಅವರು ಅದರ ಬಗ್ಗೆ ಅಭಿಪ್ರಾಯ ಕೇಳಿದರು. ಇಂತಹ ತಫ್‌ಸೀರ್ ಪರ್ಶಿಯನ್ ಭಾಷೆಯಲ್ಲಿ ಇಲ್ಲ ಎಂದು ಅವರು ಹೇಳಿದರು. ತಫ್‌ಸೀರ್ ಕಬೀರನ್ನು ಅರಬಿ ಭಾಷೆಯಲ್ಲಿರುವ ವ್ಯಾಖ್ಯಾನಗಳೊಂದಿಗೆ ಹೋಲಿಸುವ ಕುರಿತು ಅವರನ್ನು ಕೇಳಿದಾಗ, ಅರಬಿ ಭಾಷೆಯ ವ್ಯಾಖ್ಯಾನ ಗ್ರಂಥಗಳು ಪಾಟ್ನದಲ್ಲಿ ದೊರಕುವುದಿಲ್ಲ ಎಂದು ಉತ್ತರವಾಗಿ ಹೇಳಿದರು. ಪ್ರೊಫೆಸರ್ ಮನ್ನಾನ್ ಹೇಳಿದರು:- ಮಿರ್ಝಾ ಮಹ್‌ಮೂದ್ ಬರೆದಂತಹ ಪವಿತ್ರ ಖುರ್‌ಆನಿನ ವ್ಯಾಖ್ಯಾನ ಗ್ರಂಥ ಯಾವುದೇ ಭಾಷೆಯಲ್ಲಿಲ್ಲ. ಈಜಿಪ್ಟ್ ಮತ್ತು ಸಿರಿಯಾದಿಂದ ಅರಬಿ ವ್ಯಾಖ್ಯಾನ ಗ್ರಂಥಗಳನ್ನು ತಂದರೂ ಅವು ಈ ವ್ಯಾಖ್ಯಾನಕ್ಕೆ ಸರಿಗಟ್ಟುವಂತಹದಾಗದು.

ಸಯ್ಯದ್ ಜಾಫರ್ ಹುಸೈನ್ ಸಾಹೇಬ್ ಹೀಗೆ ಬರೆಯುತ್ತಾರೆ:- ಅವರನ್ನು ವಿದ್ರೋಹದ ಆಪಾದನೆ ಮೇರೆಗೆ ಸ್ವಾತಂತ್ರ್ಯಕ್ಕೆ ಮೊದಲು ಬಂಧಿಸಲಾಗಿತ್ತು. ಹಿಂದುಸ್ಥಾನದ ಸರಕಾರವನ್ನು ಕಿತ್ತುಹಾಕಿ ಇಸ್ಲಾಮೀ ಸರಕಾರ ಸ್ಥಾಪಿಸಲು ನಿರತರಾಗಿದ್ದಾರೆಂದು ಅವರ ಮೇಲೆ ಆರೋಪ ಹೊರಿಸಲಾಗಿತ್ತು. ಅವರು ಆಗ ಅಹ್ಮದಿ ಆಗಿರಲಿಲ್ಲ. ಅವರು ಜೈಲಿನಲ್ಲಿ ತಫ್‌ಸೀರ್ ಕಬೀರ್ ಓದಿದರು. ಅವರಿಗೆ ಅದು ಬಹಳ ಪ್ರಭಾವ ಬೀರಿತು. ಪವಿತ್ರ ಖುರ್‌ಆನನ್ನು ಪ್ರಥಮ ಬಾರಿ ಮನವರಿಕೆ ಮಾಡಿದ ಹಾಗೆ ಅವರಿಗೆ ತೋರಿತು. ಅಹ್ಮದಿಯಾ ಜಮಾಅತ್ ಸತ್ಯವೆಂದು ಅವರಿಗೆ ತಿಳಿಯಿತು. ಅವರು ಅಪಾಯಗಳಿಗೆ ಭಯಪಡಲಿಲ್ಲ. ತನಗೆ ನೇರ ಮಾರ್ಗ ತೋರಿಸಲು ಅವರು ದಿನ ರಾತ್ರೆ ಅಲ್ಲಾಹನನ್ನು ಬೇಡಿಕೊಳ್ಳುತ್ತಾ ಕಣ್ಣೀರು ಸುರಿಸಿದರು. ಅವರು ಬೈಅತ್ ಮಾಡುವ ಅಭಿಲಾಷೆ ಸೂಚಿಸಿ ಖಾದಿಯಾನಿಗೆ ಬರೆದರು. ಅವರು ಸೆಕುಂದರಾಬಾದ್ ಜೈಲಿನಲ್ಲಿ ಹೆಚ್ಚು ಕಾಲ ಇದ್ದರು. ಅಲ್ಲಿನ ಜೈಲರ್ ಮುಸ್ಲಿಮನಾಗಿದ್ದನು. ಆತನ ಸಹಿ ಪಡೆಯದೆ ಸೆರೆಯಾಳುಗಳು ಪತ್ರ ಹೊರಗೆ ಕಳುಹಿಸಲು ಸಾಧ್ಯವಿರಲಿಲ್ಲ. ಜಾಫರ್ ಸಾಹೇಬ್‌ರು ಮಾಡಿದುದು ಸರಿಯಲ್ಲವಾದರೂ ಅವರು ಜೈಲರನ ಗಮನಕ್ಕೆ ತಾರದೆ ಖಾದಿಯಾನಿಗೆ ಪತ್ರ ಬರೆದರು. ಖಾದಿಯಾನಿನಿಂದ ಬಂದ ಉತ್ತರವನ್ನು ಜೈಲರ್ ನೋಡಿದರು. ಅವನು ಜಾಫರ್ ಸಾಹೇಬರ ಬಳಿಗೆ ಬಂದು ಅನುಕಂಪದ ಸ್ವರದಲ್ಲಿ, ತಫ್‌ಸೀರ್ ಕಬೀರ್ ಬಿಟ್ಟು ಮೌಲಾನ ಮೌದೂದಿ ಮತ್ತು ಮೌಲಾನ ಅಬುಲ್ ಕಲಾಮ್ ಆಝಾದ್‌ರವರ ಪವಿತ್ರ ಖುರ್‌ಆನ್ ವ್ಯಾಖ್ಯಾನ ಓದಲು ಹೇಳಿದರು. ಜಾಫರ್ ಸಾಹೇಬರು ಆ ಎರಡು ವ್ಯಾಖ್ಯಾನಗಳನ್ನು ಓದಿದರು. ಅವರು ಜೈಲರ್‌ನೊಂದಿಗೆ ಆ ವ್ಯಾಖ್ಯಾನಗಳಲ್ಲಿರುವ ತಪ್ಪುಗಳನ್ನು ವಿವರಿಸಿದರು. ಏಕೆಂದರೆ ತಫ್‌ಸೀರ್ ಕಬೀರ್ ಓದಿದ ಕಾರಣ ಅವರಿಗೆ ಇತರ ವ್ಯಾಖ್ಯಾನಗಳನ್ನು ವಿಮರ್ಶಿಸುವ ಸಾಮರ್ಥ್ಯ ಲಭಿಸಿತ್ತು. ಜಾಫರ್ ಸಾಹೇಬರು ತನ್ನ ಬೈಅತ್ ಫಾರ್ಮ್ ಖಾದಿಯಾನಿಗೆ ಕಳುಹಿಸಿದರು. ತನ್ನ ಬೈಅತ್ ಅಂಗೀಕರಿಸಲ್ಪಡಲು ಪ್ರಾರ್ಥಿಸುತ್ತಾ ಇದ್ದರು. ಅವರಿಗೆ ಹಝ್ರತ್ ಮುಸ್ಲಿಹ್ ಮೌಊದ್ ರಳಿಯಲ್ಲಾಹು ಅನ್‌ಹು ಹೀಗೆ ಬರೆದರು: ಪ್ರತಿಯೊಬ್ಬ ಅಹ್ಮದಿ ಸರಕಾರಕ್ಕೆ ನಿಷ್ಠನಾಗಿರಬೇಕು ಅವನು ಎಲ್ಲವನ್ನು ನ್ಯಾಯನಿಷ್ಠನಾಗಿ ಮಾಡಬೇಕು. ಜಾಫರ್ ಸಾಹೇಬರು ಹೀಗೆ ಬರೆದರು: ತಫ್‌ಸೀರ್ ಕಬೀರ್ ಅಧ್ಯಯನ ಮಾಡಿದುದರಿಂದ ಇವೆಲ್ಲವೂ ನನ್ನ ಹೃದಯದಲ್ಲಿ ಅಚ್ಚೊತ್ತಿವೆ. ಸ್ವಲ್ಪ ಸಮಯದ ನಂತರ ಅವರ ಬೈಅತ್ ಅಂಗೀಕಾರವಾಯಿತು.

ಜಾಫರ್ ಸಾಹೇಬ್ ಹೀಗೆ ಬರೆದರು:- "ಮುಸ್ಲಿಹ್ ಮೌಊದ್ ಸೆರೆಯಾಳುಗಳನ್ನು ಬಿಡುಗಡೆ ಮಾಡಿಸುವರು ಎಂದು ಭವಿಷ್ಯವಾಣಿಯಲ್ಲಿದೆ. ನನ್ನ ಬಿಡುಗಡೆಗೆ ಪ್ರಾರ್ಥಿಸಿರಿ." ಸ್ವಲ್ಪ ಸಮಯದ ನಂತರ ಅವರನ್ನು ಬಿಡುಗಡೆ ಮಾಡಲಾಯಿತು. ಅವರು

ಹೇಳುತ್ತಾರೆ:- ಹಝ್ರತ್ ಮುಸ್ಲಿಹ್ ಮೌಊದ್ ಬಗ್ಗೆ ಅವರು ಸೆರೆಯಾಳುಗಳನ್ನು ಬಿಡುಗಡೆ ಮಾಡಿಸುವರು ಎಂಬ ಭವಿಷ್ಯವಾಣಿಯ ಜೀವಂತ ದೃಷ್ಟಾಂತ ನಾನು ಆಗಿರುವೆನು.

ಇಂಗ್ಲಿಷ್ ಭಾಷೆಯಲ್ಲಿ ಪ್ರಕಟಿಸಲಾದ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಐದು ಸಂಪುಟಗಳ ಬೃಹತ್ ವ್ಯಾಖ್ಯಾನ ಗ್ರಂಥದ ಬಗ್ಗೆ ಪಾಶ್ಚಿಮಾತ್ಯ ದೇಶದ ವಿದ್ವಾಂಸರು ಪ್ರಕಟಿಸಿದ ಅಭಿಪ್ರಾಯಗಳಲ್ಲಿ ಎ.ಜೆ. ಆರ್‌ಬರಿ, ಅರಬಿ, ಪರ್ಶಿಯನ್ ಮತ್ತು ಇಸ್ಲಾಮ್ ಬಗ್ಗೆ ಅಧ್ಯಯನ ನಡೆಸಿದ ವಿದ್ವಾಂಸರಾಗಿದ್ದ ಅವರ ಅಭಿಪ್ರಾಯ ನಾನು ವಿವರಿಸುತ್ತೇನೆ. ಅವರು ಹೇಳಿದರು:- ಐದು ಸಂಪುಟಗಳಲ್ಲಿ ಪವಿತ್ರ ಖುರ್‌ಆನಿನ ವ್ಯಾಖ್ಯಾನ ಒಂದು ಬಹಳ ದೊಡ್ಡ ಜಯಶಾಲಿ ಯೋಜನೆಯಾಗಿದೆ. ಪ್ರತಿಯೊಂದು ಪವಿತ್ರ ಖುರ್‌ಆನ್ ವಚನದ ಶಬ್ದಾರ್ಥ ಮತ್ತು ವ್ಯಾಖ್ಯಾನವನ್ನೊಳಗೊಂಡ ಗ್ರಂಥ ಪ್ರಕಟಗೊಂಡದ್ದು ಹಝ್ರತ್ ಮಿರ್ಝಾ ಮಹ್‌ಮೂದ್ ಅಹ್ಮದರ ನೇತೃತ್ವದಲ್ಲಿ ಅಹ್ಮದಿ ವಿದ್ವಾಂಸರು ಭಾಷಾಂತರಗೊಳಿಸಿದ ಮೂಲಕವಾಗಿದೆ. ಎ.ಜೆ. ಆರ್‌ಬರಿಯವರು ಈ ವ್ಯಾಖ್ಯಾನಗ್ರಂಥದ ಪ್ರಥಮ ಸಂಪುಟವನ್ನು ನೋಡಿ ತನ್ನ ಅಭಿಪ್ರಾಯ ಸೂಚಿಸಿದ್ದರು. ಆ ಕಾಲದಲ್ಲಿ ಕೇವಲ ಒಂಬತ್ತು ಸೂರತ್‌ಗಳ ವ್ಯಾಖ್ಯಾನ ಪ್ರಥಮ ಸಂಪುಟದಲ್ಲಿ ಪ್ರಕಟಗೊಂಡಿತ್ತು. ಆರ್‌ಬರಿ ಹೇಳಿದರು:- "ಈ ವ್ಯಾಖ್ಯಾನ ಗ್ರಂಥದ ದೀರ್ಘ ಮುನ್ನುಡಿ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ಸ್ವತಃ ಬರೆದಿದ್ದಾರೆ. ಅದರಲ್ಲಿ ಅವರು ಈ ವ್ಯಾಖ್ಯಾನ ಗ್ರಂಥದಲ್ಲಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ತನ್ನ ಗ್ರಂಥಗಳಲ್ಲಿ ಮತ್ತು ಭಾಷಣಗಳಲ್ಲಿ ಪ್ರಕಟಿಸಿದ ಆಧ್ಯಾತ್ಮಿಕ ಜ್ಞಾನ, ಪ್ರಥಮ ಖಲೀಫರು ಮತ್ತು ತಾನು ಪ್ರಕಟಿಸಿದ ಜ್ಞಾನಗಳು ಒಳಗೊಂಡಿವೆ ಎಂದು ಬರೆದಿದ್ದಾರೆ. ಆದುದರಿಂದ ಈ ಪವಿತ್ರ ಖುರ್‌ಆನ್ ವ್ಯಾಖ್ಯಾನ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಪವಿತ್ರ ಖುರ್‌ಆನಿನ ಬಗ್ಗೆ ಹೊಂದಿರುವ ನಿಲುವನ್ನು ಪ್ರಕಟಿಸುತ್ತದೆ."

ಸಿರಿಯಾ ದೇಶದ ಡಾಕ್ಟರ್ ಅನಸ್ ಹೀಗೆ ಬರೆದಿದ್ದಾರೆ: ಅವರು ವಿವಿಧ ವಿದ್ವಾಂಸರು ಬರೆದ ಪವಿತ್ರ ಖುರ್‌ಆನಿನ ವ್ಯಾಖ್ಯಾನ ಗ್ರಂಥಗಳನ್ನು ಓದಿದ್ದಾರೆ. ಅವುಗಳಲ್ಲಿ ಮುಹ್ಯುದ್ದೀನ್ ಇಬ್ನು ಅರಬಿ ಎಂಬ ವಿದ್ವಾಂಸರ ವ್ಯಾಖ್ಯಾನ ಸಹ ಸೇರಿದೆ. ಆದರೆ ಹಝ್ರತ್ ಮಿರ್ಝಾ ಮಹ್‌ಮೂದ್ ಅಹ್ಮದ್ ರಝಿಯಲ್ಲಾಹು ಅನ್‌ಹುರವರ ವ್ಯಾಖ್ಯಾನ ಓದುವುದರಿಂದ ದೊರೆತ ಸಂತೋಷ ಬೇರೆ ಯಾವುದೇ ಗ್ರಂಥಗಳಿಂದ ದೊರಕಲಿಲ್ಲ. ಅಹ್ಮದಿಯಾ ವೆಬ್‌ಸೈಟ್‌ನಲ್ಲಿ ತಫ್‌ಸೀರ್ ಓದಿದಾಗ ಅದರಲ್ಲಿ ಅವರಿಗೆ ಪ್ರಕಾಶ ಮತ್ತು ಸತ್ಯ ಕಾಣಿಸಿತು.

ಮೋರೋಕೋ ದೇಶದ ಜಮಾಲ್ ಸಾಹೇಬ್ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರಿಗೆ ದೀರ್ಘಕಾಲ ಪತ್ರ ಬರೆಯುತ್ತಾ ಇದ್ದರು. ಅವರಿಗೆ ತಫ್‌ಸೀರ್ ಕಬೀರ್‌ನ ಪ್ರಥಮ ಸಂಪುಟ ಕಳುಹಿಸಿಕೊಡಲಾಯಿತು. ಅವರು ಅದನ್ನು ಓದಿ ಅವರು ಓದಿದ ಬೇರೆ ಪವಿತ್ರ ಖುರ್‌ಆನ್ ವ್ಯಾಖ್ಯಾನ ಗ್ರಂಥಗಳೊಂದಿಗೆ ಹೋಲಿಸಿ ನೋಡಿದರು. ಅವರು ಕಂಡ ವ್ಯತ್ಯಾಸ ಬೃಹತ್ತಾಗಿತ್ತು. ತಫ್‌ಸೀರ್ ಕಬೀರ್‌ನಲ್ಲಿ ಶರೀಅತಿನ ತಿರುಳು ಇದೆ. ಆದರೆ ಇತರ ವ್ಯಾಖ್ಯಾನಗಳಲ್ಲಿ ಕೇವಲ ಶರೀಅತಿನ ಸಿಪ್ಪೆ ಮಾತ್ರ ಇದೆ ಎಂದು ಅವರು ಕಂಡರು. ತಫ್‌ಸೀರ್ ಕಬೀರ್ ಅವರ ಹೃದಯದಲ್ಲಿ ಇಸ್ಲಾಮಿನ ಸುಂದರ ಚಿತ್ರವನ್ನು ಚಿತ್ರಿಸಿತು ಮತ್ತು ಅವರ ಆತ್ಮವನ್ನು ಪ್ರವೇಶಿಸಿತು ಎಂದು ಅವರು ಬರೆಯುತ್ತಾರೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಭಾಷಣಗಳ ಬಗ್ಗೆ ಹೇಳುವುದಾದರೆ, ಅವರು ಲಾಹೋರಿನ ಲಿಟರರಿ ಲೀಗ್ ಅಪೇಕ್ಷೆ ಪ್ರಕಾರ ಎರಡು ಭಾಷಣಗಳನ್ನು ಮಾಡಿದ್ದರು. ಅದರಲ್ಲಿ ಒಂದು ಭಾಷಣ ಜಾಗತಿಕ ಭಾಷೆಗಳಲ್ಲಿ ಅರಬಿ ಭಾಷೆಯ ಸ್ಥಾನ ಎಂಬ ವಿಷಯದ ಬಗ್ಗೆಯಾಗಿತ್ತು. 1934 ಮೇ ದಿನಾಂಕ 31ರಂದು ಲಾಹೋರಿನ ವೈ.ಎಮ್.ಸಿ.ಎ ಹಾಲ್‌ನಲ್ಲಿ ಭಾಷಣ ಮಾಡಿದ ಸಭೆಯಲ್ಲಿ ಲಾಹೋರಿನ ಇಸ್ಲಾಮಿಯ ಕಾಲೇಜಿನ ಪ್ರಿನ್ಸಿಪಾಲ್ ಡಾಕ್ಟರ್ ಬರಕಾತ್ ಅಲಿ ಖುರೈಶಿ ಅಧ್ಯಕ್ಷರಾಗಿದ್ದರು. ಒಂದೂವರೆ ಗಂಟೆಕಾಲ ಮಾಡಿದ ಭಾಷಣವನ್ನು ಶ್ರೋತೃಗಳು ಆಸಕ್ತಿಯಿಂದ ಆಲಿಸಿದರು. ಡಾಕ್ಟರ್ ಖುರೈಶಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರಿಗೆ ಕೃತಜ್ಞತೆ ಅರ್ಪಿಸಿದರು ಮತ್ತು ಶ್ರೋತೃಗಳು ಅದರ ಲಾಭ ಪಡೆಯಬೇಕೆಂದು ಹೇಳಿದರು. ಇಂತಹ ಭಾಷಣ ಇನ್ನು ಮುಂದೆ ಸಹ ಆಲಿಸಲು ಬಯಸುತ್ತೇನೆ ಎಂದು ಡಾಕ್ಟರ್ ಖುರೈಶಿ ಹೇಳಿದರು.

ಕಾಶ್ಮೀರದ ಒಬ್ಬ ಮಾಜಿ ಚೀಫ್ ಜಸ್ಟಿಸ್ ಸಹ ಅಲ್ಲಿ ಇದ್ದರು. ಅವರು ಕೃತಜ್ಞತೆ ಅರ್ಪಿಸುತ್ತಾ ಅತ್ಯಂತ ಸಾಮರ್ಥ್ಯವುಳ್ಳ ವಾಗ್ಮಿಯಿಂದ ಭಾಷಣ ಆಲಿಸಿ ಬಹಳ ಸಂತೋಷವಾಯಿತು ಎಂದು ಹೇಳಿದರು. ತಾನು ಈ ಭಾಷಣ ಹಳೆಯ ಶೈಲಿಯಲ್ಲಿರಬಹುದೆಂದು ಭಾವಿಸಿದ್ದೆ ಎಂದು ಅವರು ಹೇಳಿದರು. ಒಬ್ಬ ಅರಬಿಯೊಂದಿಗೆ ಅರಬಿ ಭಾಷೆಯ ಶ್ರೇಷ್ಠತೆ ಬಗ್ಗೆ ಕೇಳಿದಾಗ ಆ ಅರಬಿ ತನ್ನೊಂದಿಗೆ ಹೀಗೆ ಹೇಳಿದರು:- ಮೂರು ಕಾರಣಗಳಿವೆ. 1. ತಾನು ಅರಬಿ ಆಗಿರುವ ಕಾರಣ. 2.ಅರಬಿ ಭಾಷೆ ಪವಿತ್ರ ಖುರ್‌ಆನಿನ ಭಾಷೆಯಾದ ಕಾರಣ. 3. ಅರಬಿ ಸ್ವರ್ಗದ ಭಾಷೆ ಆಗಿದೆ, ಆ ಕಾರಣದಿಂದ.

ಆದರೆ ಹಝ್ರತ್ ಮಿರ್ಝಾ ಸಾಹೇಬರ ಭಾಷಣ ಬಹಳ ಉನ್ನತ ಶೈಕ್ಷಣಿಕ ಶ್ರೇಣಿಯದು ಎಂದೂ ಅದು ದಾರ್ಶನಿಕ ಜ್ಞಾನ ಭರಿತವಾಗಿದೆ ಎಂದೂ ಅದರ ಪ್ರತಿಯೊಂದು ಶಬ್ದ ಕಿವಿಗೊಟ್ಟು ಆಲಿಸಿ ಅದರಿಂದ ಲಾಭ ಪಡೆದೆ ಎಂದೂ ತನ್ನ ಹೃದಯದಲ್ಲಿ ಉಂಟಾದ ಪ್ರಭಾವ ಮುಂದುವರಿಯುವುದು ಎಂದೂ ಅವರು ಹೇಳಿದರು.

ಸಯ್ಯದ್ ಅಬ್ದುಲ್ ಖಾದಿರ್ ಸಾಹೇಬ್ ಲಾಹೋರಿನ ಇಸ್ಲಾಮಿಯಾ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಆಗಿದ್ದರು. ಅವರು "ಇಸ್ಲಾಮ್ ಮತ್ತು ಕಮ್ಯುನಿಸಮ್" ಎಂಬ ಪುಸ್ತಕ ಬರೆದಿದ್ದರು. ಅದರಲ್ಲಿ ಲೇಖಕರು ಬರೆದಿದ್ದಾರೆ. ನನ್ನ ಈ ಲೇಖನಕ್ಕೆ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ಸಾಹೇಬರ "ಇಕೋನೋಮಿಕ್ ಸಿಸ್ಟಮ್ ಆಫ್ ಇಸ್ಲಾಮ್ ಆ್ಯಂಡ್ ಕಮ್ಯುನಿಸಮ್" ಎಂಬ ಭಾಷಣ ಸಹಾಯ ಮಾಡಿದೆ. ಆ ಭಾಷಣ ನಾನು ಆಲಿಸಿದ್ದೇನೆ. ಮಿರ್ಝಾ ಸಾಹೇಬರ ಇತರ ಭಾಷಣಗಳ ಹಾಗೆ ಈ ಭಾಷಣ ಜ್ಞಾನ ವರ್ಧಕವಾಗಿದೆ. ಮಿರ್ಝಾ ಸಾಹೇಬರಿಗೆ ದೇವನು ಸಾಮರ್ಥ್ಯ ನೀಡಿರುವನು. ಅವರಿಗೆ ಪ್ರತಿಯೊಂದು ವಿಷಯದ ಬಗ್ಗೆ ತಳಸ್ಪರ್ಶಿ ಜ್ಞಾನವಿದೆ. ಅವರ ಚಿಂತನೆಗಳು ಗಮನಾರ್ಹವೂ ಮೌಲ್ಯಭರಿತವೂ ಆಗಿವೆ.

ಈ ಪುಸ್ತಕವನ್ನು ನಾವು ಲೋಕದಲ್ಲಿ ಪ್ರಚಾರ ಮಾಡಬೇಕು. ಇಸ್ಲಾಮಿನ ಆರ್ಥಿಕ ಶಾಸ್ತ್ರದ ಬಗ್ಗೆ ಮೌಲಾನ ಮೌದೂದಿ ಮೊದಲು ಬರೆದದೆಂದು ಹೇಳುತ್ತಾರೆ. ಆದರೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತನ್ನ ಭಾಷಣ ಈ ವಿಷಯದ ಬಗ್ಗೆ ಮೌಲಾನ ಮೌದೂದಿಗಿಂತ ಎಷ್ಟೋ ಕಾಲ ಮೊದಲು ಮಾಡಿದ್ದರು. ಇದು ಪುಸ್ತಕ ರೂಪದಲ್ಲಿ ಇದೆ. ಇದರ ಇಂಗ್ಲಿಷ್ ಭಾಷಾಂತರ ಮಾಡಲಾಗಿದೆ. ಇದನ್ನು ಇಂಗ್ಲಿಷ್ ಬಲ್ಲವರು ಓದಿ ಇತರರಿಗೂ ಕೊಡಬೇಕು.

ಲಾಲಾ ರಾಮ್ ಚಂದ್ ಎಂಬ ಗಣ್ಯರು ಈ ಭಾಷಣ ಮಾಡಲಾದ ಸಭೆಯ ಅಧ್ಯಕ್ಷರಾಗಿದ್ದರು. ಈ ಭಾಷಣ ಕೇಳಲು ಸಾಧ್ಯವಾದುದು ಭಾಗ್ಯ ಎಂದೂ ಅದರಿಂದ ಪ್ರಯೋಜನ ಪಡೆದೆ ಎಂದೂ ಅವರು ಹೇಳಿದರು. ಇಸ್ಲಾಮ್ ಕೇವಲ ಮುಸ್ಲಿಮರ ಬಗ್ಗೆ ಕಾಳಜಿ ಹೊಂದಿದೆ, ಅನ್ಯರ ಬಗ್ಗೆ ಇಲ್ಲ ಎಂದು ನಾನು ನಂಬಿದ್ದೆ. ಆದರೆ ಇಸ್ಲಾಮ್ ಸಮಾನತೆ ಪ್ರತಿಪಾದಿಸುತ್ತದೆ ಎಂದು ಈ ಭಾಷಣದಿಂದ ತಿಳಿಯಿತು. ಇಂತಹ ಇಸ್ಲಾಮನ್ನು ಗೌರವ ಭಾವದಿಂದ ಕಾಣಬೇಕೆಂದು ತನ್ನ ಮುಸ್ಲಿಮೇತರ ಸ್ನೇಹಿತರಿಗೆ ಹೇಳುವೆನು ಎಂದು ಹೇಳಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರಿಗೆ ಪದೇಪದೇ ಕೃತಜ್ಞತೆ ಅರ್ಪಿಸಿದರು.

ಅವರು ಲೌಕಿಕ ಮತ್ತು ಆಧ್ಯಾತ್ಮಿಕ ಜ್ಞಾನ ಸಂಪನ್ನರಾಗುವರು ಎಂಬುದರ ಬಗ್ಗೆ ಕೇವಲ ಒಂದು ನೋಟವನ್ನು ನೀಡಲಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ಬಿಟ್ಟು ಹೋದ ಜ್ಞಾನ ನಿಧಿಯ ಲಾಭ ಪಡೆಯುವ ಭಾಗ್ಯ ನಮಗೆ ದೊರಕಲಿ. ನಾನು ಇದರ ಮೊದಲು ಹೇಳಿದ ಹಾಗೆ ಅವರು ಎಲ್ಲಾ ವಿಷಯಗಳ ಬಗ್ಗೆ ಅಗಾಧ ಜ್ಞಾನ ಹೊಂದಿದ್ದರು. ನಾವು ಅದರ ಲಾಭ ಪಡೆದು ನಮ್ಮ ಜ್ಞಾನ ವರ್ಧಿಸುವ ಹಾಗೆ ಆಗಲಿ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಪುತ್ರ ಸಾಹಿಬ್‌ಝಾದ ಮಿರ್ಝಾ ಹನೀಫ್ ಅಹ್ಮದ್ 82ನೇ ವಯಸ್ಸಿನಲ್ಲಿ ಫೆಬ್ರವರಿ 17ರಂದು ನಿಧನ ಹೊಂದಿರುವರು. ಅವರ ಜನಾಝ ಗಾಯಿಬ್ ನಮಾಝ್ ಜುಮುಅ ನಮಾಝ್‌ನ ನಂತರ ಅನುಷ್ಠಿಸಲಾಗುವುದು. ಅವರು 1932ರಲ್ಲಿ ಜನಿಸಿದರು. ಇತರ ಮಕ್ಕಳ ಹಾಗೆ ಅವರು ತನ್ನ ಜೀವಿತವನ್ನು ಜಮಾಅತಿಗೆ ಅರ್ಪಿಸಿದರು. ಅವರು ಮದ್ರಸ ಅಹ್ಮದಿಯಾದಲ್ಲಿ ವಿದ್ಯೆ ಕಲಿತ ನಂತರ ಎಲ್.ಎಲ್.ಬಿ. ಸಹ ಕಲಿತಿದ್ದರು. 1962ರಲ್ಲಿ ಸಿಯಾರಾಲಿಯೋನ್ ಅಹ್ಮದಿಯಾ ಸೆಕಂಡರಿ ಶಾಲೆಯ ಪ್ರಿನ್ಸಿಪಾಲರಾಗಿ 1969ರ ತನಕ ಸೇವೆ ಸಲ್ಲಿಸಿದರು. ಅವರು ಎರಡು ಪುಸ್ತಕಗಳನ್ನು ಬರೆದಿದ್ದಾರೆ. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಪಾರ್ಸಿ, ಉರ್ದು ಪದ್ಯಗಳನ್ನೂ ಉಪದೇಶಗಳನ್ನೂ ಸಂಗ್ರಹಿಸಿದ್ದಾರೆ. 1959ರಲ್ಲಿ ತಾಹಿರ ಬೇಗಮ್‌ರನ್ನು ವಿವಾಹವಾದ ಅವರಿಗೆ ನಾಲ್ಕು ಮಕ್ಕಳಿದ್ದಾರೆ. ಸಲ್ಮಾನ್ ಅಹ್ಮದ್, ಅಮತುಲ್ ಮೂಮಿನ್ ಹಿನಾ, ಮೀನಾ ಮುಬಾರಕ, ಅಮತುಸ್ಸಮೀ ಅವರ ಹೆಸರುಗಳಾಗಿವೆ. ಅವರ ಪತ್ನಿ ಹೇಳುತ್ತಾರೆ: ಸಿಯಾರಾಲಿಯೋನ್ ಬೋ ಸಿಟಿಯಲ್ಲಿ ಅಹ್ಮದಿಯಾ ಸ್ಕೂಲಿನಲ್ಲಿ ಅವರು ಸಯನ್ಸ್ ಬ್ಲೋಕ್ ನಿರ್ಮಿಸಿದರು. ಅವರನ್ನು ಸಿಯಾರಾಲಿಯೋನಿನ ಜನರು ಈಗಲೂ ನೆನಪಿಸುತ್ತಾರೆ. ಅವರು ಅನಾಥರಿಗೆ ರಹಸ್ಯವಾಗಿ ಸಹಾಯ ಮಾಡುತ್ತಿದ್ದರು. ಅವರ ಒಬ್ಬ ಸ್ನೇಹಿತ ಮೃತನಾದಾಗ ಅವರ ಕುಟುಂಬದ ಬಗ್ಗೆ ವ್ಯವಸ್ಥೆ ಮಾಡಿ ಆ ಸ್ನೇಹಿತರ ಮಕ್ಕಳ ವಿವಾಹ ನಡೆಸಿಕೊಟ್ಟರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಮಕ್ಕಳಲ್ಲಿ ಅವರಿಗೆ ಮಾತ್ರ ಪರ್ಶಿಯನ್ ಭಾಷೆಯಲ್ಲಿ ಪ್ರಾವಿಣ್ಯತೆ ಇತ್ತು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಚೆನ್ನಾಗಿ ಅಧ್ಯಯನ ಮಾಡಿದ್ದರು. ಅವರು ಪ್ರತಿಯೊಂದು ಪುಸ್ತಕ ಇಪ್ಪತ್ತು ಇಪ್ಪತ್ತೈದು ಸಾರಿ ಓದಿರುವುದಾಗಿ ಅವರ ಪತ್ನಿ ಹೇಳುತ್ತಾರೆ. ಅವರಿಗೆ ಖಾದಿಯಾನಿನ ಬಗ್ಗೆ ಬಹಳ ಪ್ರೀತಿ ಇತ್ತು. ಅವರ ಆರೋಗ್ಯ ಚೆನ್ನಾಗಿರಲಿಲ್ಲವಾದರೂ ಕಳೆದ ಕೆಲವು ವರ್ಷಗಳಲ್ಲಿ ಖಾದಿಯಾನಿಗೆ ಹೋಗುತ್ತಾ ಇದ್ದರು. ಅವರಿಗೆ ಪ್ರಾರ್ಥನೆ ಬಗ್ಗೆ ಬಹಳ ವಿಶ್ವಾಸವಿತ್ತು. ತಾನು ಮೃತನಾದ ನಂತರ ತನ್ನ ಬಗ್ಗೆ ಪ್ರಾರ್ಥಿಸಲು ತನ್ನ ಮಕ್ಕಳೊಂದಿಗೆ ಹೇಳಿದ್ದರು. ಅವರ ಮಕ್ಕಳು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಆದರ್ಶವನ್ನು ಪಾಲಿಸುವವರಾಗಲಿ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತನ್ನ ಕುಟುಂಬದ ಬಗ್ಗೆ ಮತ್ತು ಜಮಾಅತಿನ ಬಗ್ಗೆ ಮಾಡಿದ ಪ್ರಾರ್ಥನೆಗಳನ್ನು ಅಲ್ಲಾಹನು ಅಂಗೀಕರಿಸಲಿ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಪ್ರಾರ್ಥಿಸಿದರು: "ಅವರ ಮಕ್ಕಳು, ಮೊಮ್ಮಕ್ಕಳು, ಶಾಶ್ವತವಾಗಿ ನಿನ್ನ ಅಭಯದಲ್ಲಿರಲಿ. ಶೈತಾನನ ಆಕ್ರಮಣಗಳಿಂದ ಅವರೆಲ್ಲರೂ ರಕ್ಷಿಸಲ್ಪಡಲಿ."

ಅಲ್ಲಾಹನು ಸಾಹಿಬ್‌ಝಾದ ಹನೀಫ್ ಅಹ್ಮದ್‌ರಿಗೆ ಮಗ್ಫಿರತ್ ನೀಡಲಿ; ಅವರ ಸ್ಥಾನವನ್ನು ಉನ್ನತಗೊಳಿಸಲಿ; ಅವರ ಮಕ್ಕಳು ತಮ್ಮ ವಂಶದ ಪಾರಂಪರ್ಯವನ್ನು ರಕ್ಷಿಸುವವರಾಗಲಿ. ಅವರಿಗೆ ನನ್ನೊಂದಿಗೆ ನಿಕಟ ಸಂಬಂಧವಿತ್ತು. ಖಿಲಾಫತ್ ನಂತರ ಈ ಸಂಬಂಧ ಇನ್ನಷ್ಟು ವರ್ಧಿಸಿತು. ಅಲ್ಲಾಹನು ಅವರಿಗೆ ಉನ್ನತ ಸ್ಥಾನವನ್ನು ದಯಪಾಲಿಸಲಿ. ಅವರ ಸಂತಾನದವರು ಖಿಲಾಫತ್‌ನೊಂದಿಗೆ ವಿಶಿಷ್ಟ ಸಂಬಂಧ ಸ್ಥಾಪಿಸುವವರಾಗಲಿ.

––––––––––––––****––––––––––––––

**Friday Sermon delivered by Hadrath Khaleefathul Masih Al Khamis**(atba)
at Masjid Baithul Futhuh, London on 21-02-2014

**Kannada Translation:** M. Ubaidullah Saheb

**Contact Address:** DARUSSALAM, Ahmadiyya Muslim Jama'at, Near Railway Level Crossing,
Behind Delta-West Building, Pandeshwr, Mangalore – 575 001

**Email**: khutuba.kannada@gmail.com